

# ಸೋಯಿಂಕಾ ಎಂಬ ಶಶಾಂಕ

■ ಪ್ರವೀಣ ಕುಲಕರ್ಣಿ

ಅಕಿನ್‌ವಾಂಡೆ ಒಲುವೋಲೆ ಸೋಯಿಂಕಾ ಅಂದರೆ ಥಟ್ಟನೇ ಯಾರಂತ ಗೊತ್ತಾಗಲ್ಲ, ಅಲ್ಲವೇ? ಅದೇ ವೋಲೆ ಸೋಯಿಂಕಾ ಅಂದುನೋಡಿ, ಓಹ್, ನೊಬೆಲ್ ಪ್ರಶಸ್ತಿ ಪಡೆದ ಆಫ್ರಿಕಾದ ಮೊದಲ ಕಪ್ಪುವರ್ಣೀಯ ಸಾಹಿತಿ ಎಂಬ ಉತ್ತರ ಥಟ್ಟಂತ ಸಿಕ್ಕುಬಿಡುತ್ತದೆ. ಅಂದಹಾಗೆ, ಆಫ್ರಿಕಾದ ಮಹಾನ್ ಲೇಖಕರೆಂದೇ ಮಾನ್ಯವಾಗಿರುವ ಸೋಯಿಂಕಾ ಅವರ ತವರು ದೇಶ ನೈಜೀರಿಯಾ.

ದಶಕಗಳ ಹಿಂದೆ ನೈಜೀರಿಯಾದಲ್ಲಿ ಅಂತಃಕಲಹ ಭುಗಿಲೆದ್ದಾಗ ಸರ್ಕಾರದ ವಿರುದ್ಧ ಧ್ವನಿ ಎತ್ತಿದವರ ಪರ ನಿಂತ 'ಪ್ರಮಾದ'ಕ್ಕಾಗಿ ಸೋಯಿಂಕಾ ಅವರನ್ನು ಜೈಲಿಗೆ ತಳ್ಳಲಾಗಿತ್ತು. ಸರ್ಕಾರವು ಅವರನ್ನು ರಾಜಕೀಯ ಕೈದಿಯನ್ನಾಗಿಸಿ ನಾಲ್ಕು ಗೋಡೆಗಳ ಮಧ್ಯೆ ಒಬ್ಬಂಟಿಯಾಗಿ ಇಪ್ಪತ್ತೆರಡು ತಿಂಗಳು ಕಳೆಯುವಂತೆ ಮಾಡಿತ್ತು. ಕತ್ತಲ ಗೂಡಿನಲ್ಲಿದ್ದರೂ ಸೋಯಿಂಕಾ ಅವರೊಳಗಿನ ಸೃಜನಶೀಲ ಸೂರ್ಯ ಬೆಳಗದೆ ಬಿಡಲಿಲ್ಲ. ಅವರಿಗೆ ಪೆನ್ನು, ಪುಸ್ತಕ ಏನನ್ನೂ ಕೊಡದಿದ್ದರೂ ಉಣ್ಣಲು ಕೊಟ್ಟ ಮಾಂಸದಲ್ಲಿ ಸಿಕ್ಕ ಎಲುಬಿನ ತುಂಡನ್ನೇ ಪೆನ್ನು ಮಾಡಿಕೊಂಡು, ಕೃತಕ ಬಣ್ಣ ತಯಾರಿಸಿಕೊಂಡು, ಟಾಯ್ಲೆಟ್ ಬಳಕೆಗೆ ಇಟ್ಟಿದ್ದ ಕಾಗದದಲ್ಲಿ ಟಿಪ್ಪಣಿ ಮಾಡತೊಡಗಿದರು. ಮುಂದೆ ಈ ಟಿಪ್ಪಣಿಗಳು 'ದ ಮ್ಯಾನ್ ಡೈಡ್: ಪ್ರಿಸನ್ ಡೈರಿ' ಕೃತಿಯಾಗಿ ರೂಪುತಾಳಿದವು. ಈಗ ಇದೆಲ್ಲ ಕಥೆ ಏಕೆ ಅಂತೀರಾ? ಈಗ ಆ ಕೃತಿ ಅದೇ ಹೆಸರಿನಲ್ಲಿ ಸಿನಿಮಾ ಆಗಿದೆ. ನೈಜೀರಿಯಾದ ಅಬಿಯೊಕುಟದಲ್ಲಿರುವ 90ರ ಹರೆಯದ ಸೋಯಿಂಕಾ ಅಜ್ಜನ ಮನದಂಗಳದಲ್ಲಿ ಹಳೆಯ ನೆನಪುಗಳು ಮೆರವಣಿಗೆ ಹೊರಟಿವೆ.

'ನೀವು ಈ ಸಿನಿಮಾ ನೋಡಿದ್ದೀರಾ' ಎಂದು ಕೇಳಿದರೆ, 'ಇಲ್ಲ, ಇನ್ನೂ ನೋಡಿಲ್ಲ. ನನ್ನ ಬದುಕಿನ ಆ ಕ್ರೂರ ದಿನಗಳು ಮತ್ತೆ ಕಣ್ಮುಂದೆ ಹಾದುಹೋಗುವುದನ್ನು ಸಹಿಸಿಕೊಳ್ಳುವುದು ಕಷ್ಟ. ಹೀಗಾಗಿ ಆ ಸಿನಿಮಾವನ್ನು ನಾನು ನೋಡಿಲ್ಲ' ಎಂದು ಸೋಯಿಂಕಾ ಹೇಳುತ್ತಾರೆ. ಅಬಿಯೊಕುಟದ ಅಂಗಳದಲ್ಲಿ ಆಡಿ ಬೆಳೆದ ಈ ಮಹಾನ್ ಲೇಖಕ, ಯೊರೂಬಾ ಬುಡಕಟ್ಟಿಗೆ ಸೇರಿದವರು. ಇಬದನ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಅಧ್ಯಯನ ಮಾಡಿದವರು. ರಂಗಭೂಮಿಯ ಮೇಲೂ ಒಲವು ಬೆಳೆಸಿಕೊಂಡವರು. ಭ್ರಷ್ಟಾಚಾರದ ವಿರುದ್ಧ ನಿರಂತರವಾಗಿ ಹೋರಾಡಿದ ಅವರು, 'ದಿ ಸ್ವಾಂಪ್ ಡ್ವೆಲ್ಲರ್ಸ್', 'ದಿ ಲಯನ್ ಆ್ಯಂಡ್ ದಿ ಜುವೆಲ್', 'ಎ ಡ್ಯಾನ್ಸ್ ಆಫ್ ದಿ ಫಾರೆಸ್ಟ್' ಸೇರಿದಂತೆ ಹಲವು ನಾಟಕಗಳನ್ನು ಕೊಟ್ಟವರು. ಸೋಯಿಂಕಾ ಅವರ ನಾಟಕಗಳಲ್ಲಿ ವಿಡಂಬನೆಗೆ ಒಳಗಾಗದ ನೈಜೀರಿಯಾದ ರಾಜಕೀಯ ಮುಖಂಡರೇ ಇರಲಿಲ್ಲ.

ಆಫ್ರಿಕಾದ 'ನೆಗ್ರಿಟ್ಯೂಡ್' ಚಳವಳಿಯನ್ನು ಗೇಲಿ ಮಾಡಿದ್ದ ಅವರು, ಆಫ್ರಿಕನ್ನರ 'ಕಪ್ಪು' ಗುಣವನ್ನು ಸುಮ್ಮನೆ ವೈಭವೀಕರಿಸುತ್ತ ಆಧುನಿಕತೆಯ ಸತ್ವವನ್ನು ಅಲ್ಲಗಳೆಯುವ ಮನೋಧರ್ಮ ಸರಿಯಲ್ಲ ಎಂದು ವಾದಿಸಿದ್ದರು. ಆದರೆ, ಕಪ್ಪುವರ್ಣೀಯರ ಕುರಿತ ಅವರ ಕಾಳಜಿ ಅನನ್ಯವಾದುದು. ಪಶುಗಳಂತೆ ಸಂತೆಗಳಲ್ಲಿ ಮಾರಲ್ಪಟ್ಟು ಗುಲಾಮರೆಂಬ ಹೆಸರಿನಲ್ಲಿ ದಾರುಣದ ಬಾಳನ್ನೂ ಹೊತ್ತ ತಮ್ಮವರ ಕುರಿತು ಅವರಲ್ಲಿ ಅಪಾರ ಕಕ್ಕುಲಾತಿ. 'ಕಪ್ಪು ಜನರ ಕ್ಷಮಾಗುಣದಿಂದ ಜಗವು ಪಾಠ ಕಲಿಯಬೇಕು' ಎಂದು ಹೇಳುವಲ್ಲಿ ಸೋಯಿಂಕಾ ಅವರಿಗೆ ಒಂದಿನಿತೂ ಹಿಂಜರಿಕೆ ಇಲ್ಲ. ಈ ಮಾತುಗಳು ಬಿಳಿಯರೆಂದು ತಿಳಿದುಕೊಂಡಿರುವ ಮನುಷ್ಯರ ಬಾಯಿಯಿಂದ ಬರುವ ತನಕವೂ ಕಪ್ಪು ಜನರ ಹೋರಾಟಕ್ಕೆ ದಣಿವಿಲ್ಲ.

ವಸಾಹತು ನೀತಿಯ ದಾಸ್ಯ, ವಿಮೋಚನೆಯ ನಂತರದ ಅರಾಜಕ ಸ್ಥಿತಿ, ಸಾಂಸ್ಕೃತಿಕ ತಳಮಳ, ತೃತೀಯ ಜಗತ್ತು ಅಥವಾ ಅಭಿವೃದ್ಧಿಶೀಲ ಜಗತ್ತು ಎಂಬ ಹೀನ ಬಿರುದುಗಳು ನೀಡಿದ ತಲ್ಲಣಗಳನ್ನೆಲ್ಲ ಬರಹದಲ್ಲಿ ಹೊರಹೊಮ್ಮಿಸುವುದು ಸುಲಭ ಹಾದಿಯೇನಲ್ಲ. ಅನುಭವಿಸಿ ಬರೆದ ಸಾಹಿತ್ಯ ಹೆಚ್ಚು ಜೀವಂತವಾಗಿರುತ್ತದೆ ಎನ್ನುವುದಕ್ಕೆ ಸೋಯಿಂಕಾ ಅವರ ಪ್ರತೀ ಕೃತಿಯಲ್ಲೂ ಸಾಕ್ಷ್ಯಗಳು ಸಿಕ್ಕುತ್ತವೆ. ನಿಮ್ಮಲ್ಲಿ ಇಂತಹ ಗಟ್ಟಿ ಸತ್ವ ಮೈಗೂಡಿದ್ದು ಹೇಗೆ ಎಂದು ಈ ಅಜ್ಜನನ್ನು ಕೇಳಿದರೆ, ಅವರು ನಕ್ಕು ಉತ್ತರಿಸುತ್ತಾರೆ: 'ನನ್ನ ಅಪ್ಪ–ಅಮ್ಮನ ಮಾತುಗಳನ್ನು ನಾನು ಮೌನವಾಗಿ ಆಲಿಸುತ್ತಿದ್ದೆ. ನಮ್ಮ ತಂದೆ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು, ಪಾದ್ರಿಯೂ ಆಗಿದ್ದರು. ಹೀಗಾಗಿ ಅವರ ಸುತ್ತ ಆಗಾಗ ದೊಡ್ಡ ಗುಂಪು ನೆರೆಯುತ್ತಿತ್ತು. ಅಲ್ಲಿ ಗಹನ ಚರ್ಚೆಗಳು ನಡೆಯುತ್ತಿದ್ದವು. ಬಾಲ್ಯದ ಆ ಕೇಳಿಸಿಕೊಳ್ಳುವಿಕೆ ನನಗೆ ಅರಿವಿಲ್ಲದಂತೆ ನನ್ನ ಮೇಲೆ ಗಾಢಪ್ರಭಾವ ಬೀರಿದೆ. ನಾನು ಬೆಳೆದ ಪರಿಸರ ಕೂಡ ನನ್ನ ವ್ಯಕ್ತಿತ್ವವನ್ನು ರೂಪಿಸಿದೆ'.

ನಾಟಕ, ಕಾವ್ಯ, ಕಾದಂಬರಿ, ಪ್ರಬಂಧ ಹೀಗೆ ಎಲ್ಲ ಬಗೆಯ ಸಾಹಿತ್ಯದಲ್ಲೂ ಕೃಷಿ ಮಾಡಿದ ಸೋಯಿಂಕಾ, ಹಿಂದೆ ಯಾವ ಸರ್ಕಾರದಿಂದ ಜೈಲಿಗೆ ತಳ್ಳಲ್ಪಟ್ಟಿದ್ದರೋ ಇಂದು ಅದೇ ಸರ್ಕಾರದಿಂದ ಗೌರವಕ್ಕೆ ಭಾಜನರಾಗಿದ್ದಾರೆ. ನೈಜೀರಿಯಾದ ರಾಷ್ಟ್ರೀಯ ಕಲಾಶಾಲೆಗೆ ಅವರ ಹೆಸರನ್ನು ಇಡಲಾಗಿದೆ. ಅವರ ವೈಯಕ್ತಿಕ ಜೀವನ ಆಫ್ರಿಕನ್ ಸಾಮಾನ್ಯ ಪ್ರಜೆಯ ಬದುಕಿನ ಏರಿಳಿತದಂತೆಯೇ ಇದೆ. ಮೂರು ಮದುವೆಯಾಗಿರುವ ಸೋಯಿಂಕಾ ಅವರಿಗೆ ಎಂಟು ಜನ ಮಕ್ಕಳು. ಕ್ಯಾನ್ಸರ್‌ನಿಂದ ಬಳಲಿದ ಅವರು ಸದ್ಯ ತಮ್ಮೂರಿನಲ್ಲಿ ಬಾಳ ಸಂಧ್ಯಾಕಾಲವನ್ನು ಕಳೆಯುತ್ತಿದ್ದಾರೆ. 'ದ ಮ್ಯಾನ್ ಡೈಡ್' ಸಿನಿಮಾ ಗತಕಾಲದ ಅವರ ದಿನಗಳನ್ನು ತೆರೆಯ ಮೇಲೆ ಮತ್ತೆ ಜೀವಂತವಾಗಿಸಿದೆ. ಅವರ ಕುರಿತು ಜಗತ್ತು ಮತ್ತೆ ಮಾತನಾಡುವಂತೆ ಮಾಡಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65